**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 710/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮನೋಹರ | ಪ್ರಾ.ಸಾ.5 |
| ತಂದೆಯ/ಗಂಡನ ಹೆಸರು | : | ತಿಪ್ಪೇಶಪ್ಪ | ಚಾಸಾ.5 |
| ವಯಸ್ಸು | : | 32 ವರ್ಷ | |
| ಕೆಲಸ | : | ಪೊಲೀಸ್ ಪೇದೆ, ಚಿಕ್ಕಜಾಜೂರು ಪೊಲೀಸ್ ಠಾಣೆ | ಸಾ ಪ್ರ ಬೋ |
| ವಾಸ | : | ಚಿಕ್ಕಜಾಜೂರು | ದಿಃ23.01.2025 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಸೆಪ್ಟೆಂಬರ್ 2018 ರಿಂದ ಆಗಸ್ಟ್ 2023 ರವರೆಗೆ ಚಿತ್ರಹಳ್ಳೀ ಗೇಟ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 20.04.2020 ರಂದು ರಾತ್ರಿ 10 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ.6 ರವರು ಚಾಸಾ.1 ರವರೊಂದಿಗೆ ರಾತ್ರಿ ಗಸ್ತಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ 21.04.2020 ರಂದು ಬೆಳಗಿನ ಜಾವ 5 ಗಂಟೆ ಸಮಯದಲ್ಲಿ ಶಿವಗಂಗ ಗ್ರಾಮದ ಬಳಿ ಗಸ್ತಿನ ಕರ್ತವ್ಯದಲ್ಲಿ ಇದ್ದೆವು. ಶಿವಗಂಗ ಗ್ರಾಮದ ಸಮೀಪ ಹೊಸದಾಗಿ ನಿರ್ಮಾಣವಾಗುತ್ತಿರುವ ಶಾಲೆಯ ಬಳಿ ಎನ್.ಹೆಚ್.13 ರ ರಸ್ತೆಯ ಬಳಿ ಒಂದು ಸರ್ಕಾರಿ ಆಂಬುಲೆನ್ಸ್ ಮತ್ತು ಒಂದು ಓಮಿನಿ ವಾಹನ ನಿಂತುಕೊಂಡಿತ್ತು. ಅನುಮಾನಗೊಂಡ ನಾವುಗಳು ಠಾಣಾ ಜೀಪಿನಿಂದ ಇಳಿದು ನೋಡಿದಾಗ ಅಂಬುಲೆನ್ಸ್‌ನಲ್ಲಿ ಇದ್ದ ಮದ್ಯ ತುಂಬಿರುವ ಬಾಕ್ಸ್‌ಗಳನ್ನು ಓಮಿನಿ ವಾಹನಕ್ಕೆ ತುಂಬುತ್ತಿದ್ದರು. ನಂತರ ನಾವು ಓಮಿನಿ ವಾಹನದಲ್ಲಿಇದ್ದ ಇಬ್ಬರನ್ನು ಹಾಗೂ ಆಂಬುಲನ್ಸ್‌ನಲ್ಲಿ ಇದ್ದ ಇಬ್ಬರನ್ನು ಹಿಡಿದುಕೊಂಡು ಅವರ ಹೆಸರು ಮತ್ತು ವಿಳಾಸದ ಕುರಿತು ಕೇಳಿದೆವು. ಆಗ 1 ನೇ ಗಿರೀಶ ಬಿನ್ ಸಿದ್ದಪ್ಪ, ಸುಮಾರು 30 ವರ್ಷ, ಚಾಲಕ ವೃತ್ತಿ, ದುಮ್ಮಿ ಗ್ರಾಮ ಎಂದು, 2 ನೇ ಜೀವನ್ ಬಿನ್ ಶಿವಕುಮಾರ್, 27 ವರ್ಷ, ಕೆ.ಎ.51/ಎಂ.ಎನ್.7603 ರ ಓಮಿನಿ ಚಾಲಕ, ರಾಮಘಟ್ಟ ಗ್ರಾಮ ಎಂದು, 3 ನೇ ಸುಬಾನ್ ಬಿನ್ ಫಸಲುಲ್ಲಾ ಖಾನ್, 30 ವರ್ಷ, ಪ್ರಾಥಮಿಕ ಆರೋಗ್ಯ ಕೇಂದ್ರ ಹೆಚ್.ಡಿ.ಪುರದ ಆಂಬುಲೆನ್ಸ್ ಚಾಲಕ ಎಂದು ಹಾಗೂ 4 ನೇ

ಸಂತೋಷ ಬಿನ್ ನಂಜಪ್ಪ, 34 ವರ್ಷ, ಸಾರ್ವಜನಿಕ ಆಸ್ಪತ್ರೆ, ಹೊಳಲ್ಕೆರೆಯಲ್ಲಿ ಲ್ಯಾಬ್ ಟೆಕ್ನೀಷಿಯನ್ ಎಂದು ಹೇಳಿರುತ್ತಾರೆ.

3. ನಂತರ ವಶಪಡಿಸಿಕೊಂಡ ಆರೋಪಿತರ ಕುರಿತು ಚಾಸಾ.1 ರವರು ವರದಿಯನ್ನು ತಯಾರಿಸಿ ನನ್ನ ಮೂಲಕ ಠಾಣೆಗೆ ಕಳುಹಿಸಿಕೊಟ್ಟಿರುತ್ತಾರೆ. ನಾನು ಚಾಸಾ.1 ರವರು ನೀಡಿದಂತಹ ವರದಿಯನ್ನು ಚಾಸಾ.12 ರವರಿಗೆ ನೀಡಿರುತ್ತೇನೆ. ಆ ನಂತರ ಪುನಃ ಚಾಸಾ.1 ರವರು ಇದ್ದಂತಹ ಸ್ಥಳಕ್ಕೆ ಬಂದೆನು. ನಂತರ ಸದರಿ ಸ್ಥಳದಲ್ಲಿ ಹೋಗುತ್ತಿದ್ದ ಚಾಸಾ.2 ಮತ್ತು 3 ರವರನ್ನು ಕರೆದು ಮಾಹಿತಿಯನ್ನು ನೀಡಿ ಚಾಸಾ.2 ಮತ್ತು 3 ರವರ ಸಮಕ್ಷಮದಲ್ಲಿ ಸ್ಥಳದಲ್ಲಿದ್ದ ಸರ್ಕಾರಿ ಆಂಬುಲೆನ್ಸ್ ಮತ್ತು ಓಮಿನಿ ವಾಹನವನ್ನು ಪರಿಶೀಲಿಸಲಾಗಿ ಆಂಬುಲೆನ್ಸ್‌ನ ನೋಂದಣಿ ಸಂಖ್ಯೆ ಕೆ.ಎ.16/ಜಿ-591 ಎಂದು ಇತ್ತು. ಸದರಿ ವಾಹನದ ಮೇಲೆ ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಚ್.ಡಿ.ಪುರ ಎಂದು ಬರೆದಿತ್ತು. ಸದರಿ ಆಂಬುಲೆನ್ಸ್‌ನ್ನು ಪರಿಶೀಲಿಸಲಾಗಿ ಆಂಬುಲೆನ್ಸ್‌ನ ಒಳಗೆ 10 ಬಾಕ್ಸ್‌ಗಳಿದ್ದು, ಸದರಿ ಬಾಕ್ಸುಗಳಲ್ಲಿ 180 ಎಂ.ಎಲ್.ನ 48 ಬ್ಯಾಗ್‌ಪೈಪ್‌ರ ವಿಸ್ಕಿಯ ಪೌಚುಗಳು ಇದ್ದವು. ಓಮಿನಿ ವಾಹನದಲ್ಲಿ 4 ಬಾಕ್ಸ್‌ಗಳು ಇದ್ದು, ಅವುಗಳಲ್ಲಿ 180 ಎಂ.ಎಲ್.ನ 48 ಬ್ಯಾಗ್‌ಪೈಪ್‌ರ ವಿಸ್ಕಿಯ ಪೌಚುಗಳು ಇದ್ದವು. ಅವುಗಳ ಒಟ್ಟು ಮೌಲ್ಯ ರೂ.60,614/- ಎಂದು ಕಂಡುಬಂದಿತು. ಅಮಾನತ್ತುಪಡಿಸಿಕೊಂಡ ಮದ್ಯ ತುಂಬಿದ ಎಲ್ಲಾ ಬಾಕ್ಸ್‌ಗಳನ್ನು ರಾಸಾಯನಿಕ ವರದಿ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಪ್ರತ್ಯೇಕವಾಗಿ ಒಂದೊಂದು ಚೀಲದಲ್ಲಿ ಹಾಕಿ, ದಾರದಿಂದ ಕಟ್ಟಿ, ಅರಗಿನಿಂದ ಸೀಲು ಮಾಡಿ ಪಿ.ಆರ್.ಓ. ಎಂಬ ಮೊಹರನ್ನು ಹಾಕಿರುತ್ತೇವೆ. ನಂತರ ಸ್ಥಳದಲ್ಲಿ ಇದ್ದ ವಾಹನಗಳನ್ನು ಮದ್ಯದ ಬಾಕ್ಸ್‌ಗಳನ್ನು ಹಾಗೂ 4 ಜನ ವ್ಯಕ್ತಿಗಳನ್ನು ನಮ್ಮ ವಶಕ್ಕೆ ಪಡೆದುಕೊಂಡಿರುತ್ತೇವೆ.

4. ಆರೋಪಿತರು ದುಮ್ಮಿ ಗ್ರಾಮದಲ್ಲಿ ಮದ್ಯದ ಅಂಗಡಿಯನ್ನು ಇಟ್ಟುಕೊಂಡಿರುವ ರಾಜು ಯಾನೆ ನರಸಿಂಹರಾಜು ಬಿನ್ ತಿಪ್ಪೇಸ್ವಾಮಿ ರವರು ದೊಡ್ಡ ಉಳ್ಳಾರ್ತಿ ಗ್ರಾಮದಲ್ಲಿನ ತಮ್ಮ ಮನೆಯಿಂದ ಸರ್ಕಾರಿ ಆಂಬುಲೆನ್ಸ್‌ಗೆ ಮದ್ಯದ ಬಾಕ್ಸ್‌ಗಳನ್ನು ತುಂಬಿ ಸಾಗಾಣಿಕೆ ಮಾಡಿರುತ್ತಾರೆ ಎಂದು ನಂತರ ತಿಳಿಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರು ಮತ್ತು ಮು.ಮಾ.1 ರ ಬಾಕ್ಸ್‌ಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2(ಡಿ)

ಎಂದು ಗುರುತಿಸಲಾಯಿತು. ಈ ಕುರಿತು ನಾನು ತನಿಖಾಧಿಕಾರಿಗೆ ದಿನಾಂಕ 29.04.2021 ರಂದು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಆರೋಪಿತರ ಪರ ವಕೀಲು ಕಾಲವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.